**ದಿಃ03.08.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀ ಸವಾಲು**:- ಆರೋಪಿ ಪರ ವಕೀಲರಿಂದಃ-

ನಮ್ಮ ಮನೆಯ ಬಳಿ ನಾನೊಬ್ಬನೆ ಕುಳಿತುಕೊಂಡಿದ್ದೆ. ನಮ್ಮ ಮನೆಯಿಂದ ಅಪಘಾತ ಸ್ಥಳಕ್ಕೆ 50 ಮೀಟರ್ ಅಂತರ ಇರುತ್ತದೆ. ಸದರಿ ಸ್ಥಳಕ್ಕೆ ನಮ್ಮ ಮನೆಯಿಂದ ಯಾವ ವಾಹಗಳು ಓಡಾಡುತ್ತವೆ ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಅಪಘಾತವಾಯಿತು ಎಂದು ಹೇಳುವ ಕಾರು ದೊಣ್ಣೆಹಳ್ಳಿ ಕಡೆಯಿಂದ ಬಂದಿರುತ್ತದೆ. ಅದು ಎಷ್ಟು ವೇಗವಾಗಿ ಚಲಿಸುತ್ತಿತ್ತು ಎಂದು ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಅಪಘಾತವಾದ ನಂತರ 7-10 ನಿಮಿಷ ನಂತರ ಸ್ಥಳಕ್ಕೆ ಹೋಗಿರುತ್ತೇನೆ. ಆ ಸಮಯದಲ್ಲಿ ಸುಮಾರು 4-5 ಜನ ಇದ್ದರು. ಸದರಿ ಕಾರನ್ನು ಯಾರು ಚಲಾಯಿಸುತ್ತಿದ್ದರು ಎಂದು ಹೇಳಲು ಆಗುವುದಿಲ್ಲ. ಅಪಘಾತಕ್ಕೆ ಒಳಗಾದ ವ್ಯಕ್ತಿ ಚಾಸಾ6 ಮತ್ತು ನಾನು ಒಂದೇ ಕ್ರಷರ್ ನಲ್ಲಿ ಕೆಲಸ ಮಾಡುತ್ತಿದ್ದೇವು. ಅಪಘಾತವಾದ ಸ್ಥಳದಲ್ಲಿ ರಸ್ತೆ ತಿರುವು ಇರುತ್ತದೆ. ನಮ್ಮ ಮನೆಯ ಅಕ್ಕಪಕ್ಕ 8-10 ಮನೆಗಳು ಇರುತ್ತವೆ. ಚಾಸಾ6 ರವರು ರಸ್ತೆ ದಾಟುವಾಗ ಅವರೇ ನಿರ್ಲಕ್ಷ್ಯದಿಂದ ಅಪಘಾತಕ್ಕೆ ಕಾರಣವಾಗಿರುತ್ತಾರೆ, ಆರೋಪಿ ತಪ್ಪಿನಿಂದ ಅಪಘಾತವಾಗಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ6 ರವರಿಗೆ ಪರಿಹಾರ ಪಡೆಯಲು ಅನುಕೂಲ ಮಾಡಿಕೊಡಲು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮತ್ತು ಆರೋಪಿಯೂ ಚಾಸಾ6 ರವರನ್ನು ಕರೆದುಕೊಂಡು ಹೋಗಿರುತ್ತೇವೆ. ಫಿರ್ಯಾದಿ ನಮ್ಮ ದೂರಿನಲ್ಲಿ 108 ಆಂಬುಲೆನ್ಸ್ ನ್ನು ಕರೆಸಿ ಚಾಸಾ6 ರವರನ್ನು ಕಳುಹಿಸಿರುತ್ತೇವೆ ಎಂದು ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಚಾಸಾ6 ರವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಸಿವಿಲ್ ನ್ಯಾಯಾಧೀಶರು, ಜಗಳೂರು**